**ಮಧ್ಯಂತರ ಅರ್ಜಿ ನಂ.13 ಮತ್ತು 14 ರ ಆದೇಶದನ್ವಯ ಸಾಕ್ಷಿಯನ್ನು ದಿಃ *13/08/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಪಿಪಿಜೆ ವಕೀಲರಿಂದ ಪ್ರತಿವಾದಿ ನಂ.3 ರ ಪರವಾಗಿ.***

ವಾದಿಯರು ಹೊಲ ಮತ್ತು ಮನೆಗಳಲ್ಲಿ ಹಿಸ್ಸೆ ಕೋರಿ ದಾವೆ ಸಲ್ಲಿಸಿದ್ದಾರೆ. ದಾವಾ ಸ್ವತ್ತುಗಳ ಸರ್ವೇ ನಂಬರ ಮತ್ತು ಮನೆ ನಂಬರ ಹೇಳಲು ಆಗುವುದಿಲ್ಲ. ದಾವಾ ಸ್ವತ್ತುಗಳ ಕುರಿತು ಈ ಮೊದಲೇ ವಾಟ್ನಿಯಾಗಿದೆ ಎಂದರೆ ಸರಿ. ವಾಟ್ನಿ ಪ್ರಕಾರ ಮನೆ ನನ್ನ ಗಂಡನ ಹಿಸ್ಸೆಗೆ ಬಂದಿತ್ತು ಎಂದರೆ ಸರಿ. ಸದರಿ ಮನೆಯನ್ನು ನನ್ನ ಗಂಡ ಮೂರನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೆ ಗೊತ್ತಿಲ್ಲದ ಹಾಗೇ ಮಾರಾಟ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಹಾಗೇ ಮಾರಾಟ ಮಾಡಿರುವುದು 3-4 ವರ್ಷಗಳ ಹಿಂದೆ ತಿಳಿಯಿತು. ಆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಕೂಡಿಯೇ ಇದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು 1 ನೇ ಪ್ರತಿವಾದಿ ನನ್ನನು

ತೊರೆದು ಬಹಳ ವರ್ಷಗಳು ಆಗಿವೆ ಎಂದು ಉತ್ತರಿಸುತ್ತಾರೆ. ನನ್ನ ಗಂಡ ನನ್ನನು ತೊರೆದು ಬಹಳ ವರ್ಷಗಳು ಕಳೆದಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಮನೆ ಮಾರಾಟ ಮಾಡುವ ಸಮಯದಲ್ಲಿ ಅಪಘಾತವಾಗಿ ಕಾಲು ಪೆಟ್ಟಾಗಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನಗಾಗಿರುವ ಗಾಯಕ್ಕೆ ಚಿಕಿತ್ಸೆ ಪಡೆಯಲು ಮತ್ತು ಮನೆಯ ತುರ್ತಿಗೆ ಹಣ ಬೇಕಾಗಿರುವುದರಿಂದ ದಾವಾದ ಮನೆಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ಸದರಿ ಮನೆಯ ಉತಾರವನ್ನು ನಾನು ನೋಡಿಲ್ಲ. ಸದರಿ ಉತಾರದಲ್ಲಿ 1 ನೇ ಪ್ರತಿವಾದಿಯ ಹೆಸರು ಖರೀದಿ ಆಗುವವರೆಗೆ ಮಾತ್ರ ದಾಖಲು ಇತ್ತು ಎಂದರೆ ಸರಿ. ಸದರಿ ಮನೆಯ ಉತಾರದಲ್ಲಿ ಹಿಂದಿನ ದಾಖಲೆಗಳನ್ನು ನೋಡಿದಾಗ ನನ್ನ ಅಥವಾ ವಾದಿಯರ ಹೆಸರು ದಾಖಲು ಇಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರು ಮಾತ್ರ ದಾಖಲು ಇರುವುದನ್ನು ಪರಿಗಣಿಸಿ 3 ನೇ ಪ್ರತಿವಾದಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾದ ಮನೆ 3 ನೇ ಪ್ರತಿವಾದಿಯ ಕಬ್ಜೆಯಲ್ಲಿದೆ ಎಂದರೆ ಸರಿಯಲ್ಲ. ದಾವಾದ ಮನೆಯಲ್ಲಿ 3 ನೇ ಪ್ರತಿವಾದಿ ಕಬ್ಜೆಯಲ್ಲಿಲ್ಲ ನಾನು ಕಬ್ಜೆಯಲ್ಲಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ದಾವಾ ಮನೆಯನ್ನು ಮಾರಾಟ ಮಾಡಿದ ದಿನಾಂಕದಿಂದ 3 ನೇ ಪ್ರತಿವಾದಿಯೇ ಸದರಿ ಮನೆಯ ಕಬ್ಜಾ ವಹಿವಾಟು ಹೊಂದಿದ್ದಾರೆ ಎಂದರೆ ಸರಿಯಲ್ಲ.

ನಿ.ಡಿ.1 ರಿಂದ 3 ರಲ್ಲಿ ನನ್ನ ಫೋಟೊ ಕಂಡು ಬರುತ್ತದೆ ಎಂದರೆ ಸರಿ. ನೀವು ನಿ.ಡಿ.1 ರಿಂದ 3 ರನ್ವಯ ಪ್ಲಾಟುಗಳನ್ನು ಮಾಡಿ ಮಾರಾಟ ಮಾಡಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಮಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಮತ್ತು ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ನಿ.ಡಿ.1 ರಿಂದ 3 ರನ್ವಯ ದಾಖಲೆಯನ್ನು ಬರೆದುಕೊಟ್ಟು ನನ್ನ ಹಿಸ್ಸೆಯ ಹಣ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯಿಂದ ಹಣ ವಸೂಲಿ ಮಾಡಲು ನನ್ನ ಮಕ್ಕಳ ಕಡೆಯಿಂದ ದಾವೆ

ಹೂಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಮನೆಯ ಕುರಿತು ಸಂಪೂರ್ಣವಾದ ಹಕ್ಕು ನನ್ನ ಗಂಡನಿಗೆ ಇದ್ದ ಕಾರಣ ಅದನ್ನು ಮಾರಾಟ ಮಾಡಿದ್ದು, ಸದರಿ ಆಸ್ತಿಯಲ್ಲಿ ನನಗೆ ಅಥವಾ ವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.